MANGALORE MARKET REPORTS

REGD. OFFICE :
QUICK MARKET REPORTS
Tillary Road
Mulihithlu
Mangalore - 575001
(24/7) : +91 9449074244

| Vol.48 | ENGLISH DAILY | Subscription Yearly - Rs. - | MONDAY | 31-10-2022 |
|---|---|---|---|---|

ಮಂಗಳೂರು ಹೋಲ್‌ಸೇಲ್ ಮಾರುಕಟ್ಟೆಯ ಪ್ರಸಿದ್ಧ ಮಾರಾಟಗಾರರ ದೈನಂದಿನ ಮಾರಾಟ ದರ ಮಾಹಿತಿಯನ್ನು ನಮ್ಮ QMR APP ಮುಖಾಂತರ ಪಡೆಯಿರಿ.

Get daily price information from well-known wholesale sellers of Mangalore Market, through our QMR App.

## ಮಲೇಶಿಯಾ ಪಾಮೆಣ್ಣೆ ಫ್ಯೂಚರ್ ದರ ಮತ್ತೆ ಜಿಗಿತ

ರಷ್ಯಾ ಕಪ್ಪು ಸಮುದ್ರ ರಫ್ತು ಕಾರಿಡಾರ್ ಡೀಲ್‌ನಿಂದ ಹಿಂದೆ ಸರಿದ ನಂತರ ಜಾಗತಿಕ ಸೂರ್ಯಕಾಂತಿ ಪೂರೈಕೆಯ ಮೇಲೆ ಪರಿಣಾಮ ಬೀರಲಿರುವುದರಿಂದ ಮಲೇಶಿಯನ್ ಪಾಮೆಣ್ಣೆ ಫ್ಯೂಚರ್ ದರ 4.66 ಶೇಕಡಾ (186 ರಿಂಗಿಟ್ಸ್) ಜಿಗಿತ ಕಂಡು ಟನ್‌ಗೆ 4175 ರಿಂಗಿಟ್ಸ್($ 883.50) ಆಗಿದೆ. ಕಪ್ಪು ಸಮುದ್ರ ಕಾರಿಡಾರ್ ಮೂಲಕ ಸಾಗುವ ಹಡಗುಗಳಿಗೆ ಈ ಮೊದಲು ಸುರಕ್ಷಿತ ಸಂಚಾರದ ಖಾತರಿ ನೀಡಿತ್ತು. ಆದರೆ ಉಕ್ರೈನ್ ರಷ್ಯಾದ ಸಾಗಾಣಿಕಾ ಹಡಗಿನ ಮೇಲೆ ಡ್ರೋನ್ ಆಕ್ರಮಣದ ನಂತರ ತಾನು ನೀಡಿದ ಖಾತರಿಯಿಂದ ಹಿಂದೆ ಸರಿದಿದೆಯೆನ್ನಲಾಗಿದ್ದು, ಇದರಿಂದ ಜಾಗತಿಕ ಆಹಾರ ಸಾಮಾಗ್ರಿಗಳ ಪೂರೈಕೆಯ ಮೇಲೆ ಪರಿಣಾಮ ಬೀರಲಿದೆ ಮತ್ತು ದರಗಳು ಹೆಚ್ಚಳಗೊಳ್ಳನಹುದೆನ್ನಲಾಗಿದೆ.

## ಗೋಧಿ, ಜೋಳ ಚಿಕಾಗೋ ಫ್ಯೂಚರ್ ದರ ಹೆಚ್ಚಳ

ಕಪ್ಪು ಸಮುದ್ರ ಕಾರಿಡಾರ್ ಮೂಲಕ ಸಾಗುವ ಆಹಾರ ಪೂರೈಕೆಯ ಹಡಗುಗಳಿಗೆ ಆ ಪ್ರದೇಶದಲ್ಲಿ ಸುರಕ್ಷಿತ ಪ್ರಯಾಣಕ್ಕೆ ನೀಡಿದ ಖಾತರಿಯಿಂದ ರಷ್ಯಾ ಹಿಂದೆ ಸರಿದ ನಂತರ ಚಿಕಾಗೋ ಮಾರುಕಟ್ಟೆಯಲ್ಲಿ ಗೋಧಿ, ಜೋಳ ಫ್ಯೂಚರ್ ದರಗಳು ಜಿಗಿತ ಕಂಡಿವೆಯೆನ್ನಲಾಗಿದೆ. ಭಾರತದಲ್ಲಿ ಜೋಳದ ಹೊಸ ಬೆಳೆಯ ಕಟಾವಿನ ನಂತರ ಹೊಸ ಜೋಳ ಮಾರುಕಟ್ಟೆಗೆ ಬರಲಾರಂಭಿಸಿದ್ದು, ದರದ ಮೇಲೆ ಒತ್ತಡ ಬೀಳುತ್ತಿದೆಯೆನ್ನಲಾಗಿದ್ದು, ಛಿಂದ್ವಾರ ಮಾರುಕಟ್ಟೆಯಲ್ಲಿ ದರ 11 ಶೇಕಡಾ ಕುಸಿತ ಕಂಡಿದೆಯೆನ್ನಲಾಗಿದೆ. ಪೌಲ್ಟ್ರಿ ವಲಯದಿಂದ ಹಿಂದಿನ ಕೆಲವು ತಿಂಗಳಿಂದ ಅವಶ್ಯಕತೆ ಸರಿದೂಗಿಸಲಷ್ಟೆ ಬೇಡಿಕೆಯಿದ್ದು, ವ್ಯಾಪಾರಿಗಳ ದರ ಇನ್ನೂ ಇಳಿಕೆಗೆ ಕಾಯುತ್ತಿದ್ದಾರೆನ್ನಲಾಗಿದೆ. ಕೆಲವಡೆ ಜೋಳ ಬೆಳೆಗೆ ಕೀಟಬಾಧೆಯಿದ್ದರೂ, ಈಗ ಕಟಾವಿನ ನಂತರ ಹೊಸಬೆಳೆಗೆ ಮಾರುಕಟ್ಟೆ ಪ್ರವೇಶಿಸುತ್ತಿರುವುದರಿಂದ ದರ ಇಳಿಕೆ ಕಾಣುವ ಸಾಧ್ಯತೆಯಿದ್ದು, ಜಾಗತಿಕ ದರ ಹೆಚ್ಚಳ ಕಾಣುತ್ತಿದೆ.

## ಸೋಯಾಬೀನ್ ಚಿಕಾಗೋ ದರ ದಾಖಲೆ ಹೆಚ್ಚಳ

2014 ರ ನಂತರದ ಗರಿಷ್ಠ ಮಟ್ಟಕ್ಕೇರಿದ ಸೋಯಾಬೀನ್ ಚಿಕಾಗೋ ಫ್ಯೂಚರ್ ದರ, ತೈಲ ಉತ್ಪಾದಕ ಘಟಕದಿಂದ ಬೇಡಿಕೆ ಹೆಚ್ಚಳವಾಗಿದೆ. ಸೋಯಾಬೀನ್ ಮೀಲ್ ಪಶು ಆಹಾರ ದರಗಳು ಹೆಚ್ಚಳ ಕಂಡಿವೆ.

## ಸಕ್ಕರೆ ರಫ್ತು ನಿರ್ಬಂಧ ಒಂದು ವರ್ಷ ವಿಸ್ತರಣೆ

ಕೇಂದ್ರ ಸರಕಾರ ಸಕ್ಕರೆ ರಫ್ತು ನಿರ್ಬಂಧದ ಅವಧಿಯನ್ನು ಒಂದು ವರ್ಷ, 2023 ಅಕ್ಟೋಬರ್ ಅಂತ್ಯದ ತನಕ ವಿಸ್ತರಣೆ ಮಾಡಿದೆಯೆನ್ನಲಾಗಿದೆ.